# ವಿಲಾಸಿ ಬೈಕ್‌ಗಳ..

..27ನೇ ಪುಟದಿಂದ

ಇದು ಏನೇ ಇರಲಿ, ಪ್ರಪಂಚದಲ್ಲೇ ಅತಿ ಹೆಚ್ಚು ಬೇಡಿಕೆ ಇರುವ ವಿಲಾಸಿ ಬೈಕ್ ಎಂಬ ಹೆಗ್ಗಳಿಕೆಯೂ ಇದರದ್ದು. ಹಯಬುಸಾದ 2015ರ ಹೊಚ್ಚ ಹೊಸ ಮಾದರಿ ರೇಡಿಯಲ್ ಮೌಂಟ್ ಬ್ರೆಂಬೊ ಮೊನೊಬ್ಲಾಕ್ ಕ್ಯಾಲಿಪರ್ ತಂತ್ರಜ್ಞಾನ ಹೊಂದಿದೆ. ಮುಂಭಾಗದ ಡಿಸ್ಕ್ ಬ್ರೇಕ್‌ನಲ್ಲಿ ಬಳಸುವ ಸಾಂಪ್ರದಾಯಿಕ ವಿಧಾನಕ್ಕಿಂತಲೂ ಇದು ಹೆಚ್ಚು ಬಿಗಿಯಾಗಿದೆ. ಜತೆಗೆ ಪಿಸ್ಟನ್ ಜ್ಯಾಮಿತಿಯನ್ನು 30 ಎಂಎಂನಿಂದ 32 ಎಂಎಂಗೆ ಹೆಚ್ಚಿಸಲಾಗಿದೆ. ಇದರಿಂದ ಬೈಕ್ ಅನ್ನು ಎಷ್ಟೇ ವೇಗದಲ್ಲಿದ್ದರೂ ತಕ್ಷಣವೇ ನಿಯಂತ್ರಣಕ್ಕೆ ತೆಗೆದುಕೊಂಡು ನಿಲ್ಲಿಸಬಹುದು. ಸವಾರರಿಗೆ ಅನುಕೂಲವಾಗುವಂತೆ ಮೂರು ಎಂಜಿನ್ ಕಂಟ್ರೋಲ್ ಮ್ಯಾಪ್‌ಗಳನ್ನು ಇದರಲ್ಲಿ ಅಳವಡಿಸಲಾಗಿದೆ. ಹೆದ್ದಾರಿಯಲ್ಲಿದ್ದಾಗ, ಕಚ್ಚಾ ರಸ್ತೆಯಲ್ಲಿದ್ದಾಗ ಬೇರೆ, ಬೇರೆ ಆಯ್ಕೆಗಳನ್ನು ಆಯ್ದುಕೊಂಡು ಆರಾಮವಾಗಿ ಸವಾರಿ ಮಾಡಬಹುದು.

266 ಕೆ.ಜಿ ತೂಕದ ಹಯಬುಸಾ 4 ಸ್ಟ್ರೋಕ್ ಲಿಕ್ವಿಡ್ ಕೂಲ್ಡ್, 4 ಸಿಲಿಂಡರ್ ಡಿಒಎಚ್‌ಸಿ ಎಂಜಿನ್ ಹೊಂದಿದೆ. ಆ್ಯಂಟಿ ಲಾಕ್ ಬ್ರೇಕಿಂಗ್ ಸಿಸ್ಟಂನಲ್ಲೂ (ಎಬಿಎಸ್) ಸಾಕಷ್ಟು ಸುಧಾರಣೆ ತರಲಾಗಿದೆ. ಇದರಿಂದ ರಸ್ತೆ ಪರಿಸ್ಥಿತಿ ಬದಲಾದಂತೆ ವ್ಹೀಲ್ ಲಾಕಿಂಗ್ ಆಗುವ ಸಾಧ್ಯತೆಗಳು ಕಡಿಮೆ. ಈ ಬೈಕ್‌ನ ಪರಿಷ್ಕೃತ ಮಾದರಿಯ ಮುಂಬೈ ಎಕ್ಸ್‌ಷೋರೂಂ ಬೆಲೆ 16 ಲಕ್ಷ ರೂಪಾಯಿ ಇದೆ.

## ಇಂಡಿಯನ್ ಸ್ಕಾಟ್ ಮರುಹುಟ್ಟು

'ಭಾರತದಲ್ಲಿ ಹಾರ್ಲಿ ಹೆಚ್ಚು ಜನಪ್ರಿಯ ಸೂಪರ್ ಬೈಕ್. ಆದರೆ, ನೋಟದಲ್ಲಿ ಮತ್ತು ವಿನ್ಯಾಸದಲ್ಲಿ ಹಾರ್ಲಿಯನ್ನು ನಾಚಿಸುವಂತಹ ಇಂಡಿಯನ್ ಸ್ಕಾಟ್ ಬೈಕ್‌ಗಳು ಮರು ಜೀವ ಪಡೆದು ಮತ್ತೆ ಮಾರುಕಟ್ಟೆಗೆ ಬಂದಿವೆ' ಎನ್ನುತ್ತಾರೆ ಬೆಂಗಳೂರಿನ ಇಂಡಿಯನ್ ಮೋಟಾರ್ ಸೈಕಲ್ ಕಂಪೆನಿಯ ಮಾರಾಟ ವಿಭಾಗದ ಅಧಿಕಾರಿ ಅನಿಲ್ ಶಂಕರ್.

1919ರಿಂದ 1949ರ ಅವಧಿಯಲ್ಲಿ ಭಾರಿ ಜನಪ್ರಿಯವಾಗಿದ್ದ ಈ ಬೈಕ್‌ಗಳು ತಯಾರಿಕೆ ನಿಲ್ಲಿಸಿದ್ದವು. ಇದೀಗ ಮತ್ತೆ 1133 ಸಿಸಿ ಸಾಮರ್ಥ್ಯದ ಹೊಸ ಬೈಕ್ ಬಿಡುಗಡೆ ಮಾಡುವ ಮೂಲಕ ಇಂಡಿಯನ್ ಸ್ಕಾಟ್ ರಸ್ತೆಗಿಳಿದಿದೆ.

## ಚಿತ್ರ ನಟರ ನಂಟು

ಯುವಜನರಲ್ಲಿ ವಿಲಾಸಿ ಬೈಕ್‌ಗಳ ಮೋಹ ಏರುತ್ತಿದೆ. ಈಗಿನ ಪೀಳಿಗೆಗೆ ರೋಲ್ ಮಾಡೆಲ್‌ಗಳಾಗಿರುವವರು ಹೆಚ್ಚಾಗಿ ಸಿನಿಮಾ ತಾರೆಯರು ಮತ್ತು ಕ್ರಿಕೆಟ್ ಪಟುಗಳು. ಅವರಿಂದಲೇ ಈ ಮೋಹ ಇನ್ನಷ್ಟು ಏರುತ್ತಿದೆ ಎನ್ನಬಹುದು. ಭಾರತದ ತಂಡದ ನಾಯಕ ಮಹೇಂದ್ರಸಿಂಗ್ ದೋನಿಯ ಬೈಕ್ ಮೋಹ ಎಲ್ಲರಿಗೂ ಗೊತ್ತಿದ್ದದ್ದೇ.

ಬಾಲಿವುಡ್ ನಟರಾದ ಜಾನ್ ಅಬ್ರಹಾಂ, ಅಕ್ಷಯ್ ಕುಮಾರ್ ಹಾಗೆಯೇ ಕನ್ನಡದ 'ಪವರ್ ಸ್ಟಾರ್' ಪುನೀತ್ ರಾಜ್ ಕುಮಾರ್ ಅವರಿಗೂ ಬೈಕ್‌ಗಳೆಂದರೆ ಸಿಕ್ಕಾಪಟ್ಟೆ ಕ್ರೇಜ್. 'ಅಣ್ಣಾ ಬಾಂಡ್' ಚಿತ್ರದಲ್ಲಿ ಪುನೀತ್ ವಿಶೇಷವಾಗಿ ವಿನ್ಯಾಸಗೊಳಿಸಿದ್ದ 'ಸ್ಕೆಲೆಟನ್'ಬೈಕ್ ಏರಿದ್ದನ್ನು ಸ್ಮರಿಸಬಹುದು.

ಕಿರುತೆರೆ ನಿರ್ದೇಶಕಿ ರಮ್ಯಾ ಅವರಿಗೂ ಬೈಕ್‌ಗಳೆಂದರೆ ಇಷ್ಟ. 'ನಾನು ಓದಿದ್ದು ಮೆಕ್ಯಾನಿಕಲ್ ಎಂಜಿನಿಯರಿಂಗ್. ಹೀಗಾಗಿ ಸಣ್ಣ ಪುಟ್ಟ ರಿಪೇರಿಯೂ ಬರುತ್ತದೆ. ಕಾರಿಗಿಂತಲೂ ಬೈಕ್ ಸವಾರಿ ಇಷ್ಟ' ಎನ್ನುತ್ತಾರೆ ಅವರು. ಪ್ರಿಯಾ ಹಾಸನ್ ಬೈಕ್ ಸವಾರಿ ಕಲಿತದ್ದು ಸಿನಿಮಾಗಾಗಿ. ಈಗವರು ಅದನ್ನೇ ಹವ್ಯಾಸವಾಗಿ ಮಾಡಿಕೊಂಡಿದ್ದಾರೆ. ರಜಾ ದಿನಗಳಲ್ಲಿ ಬೈಕ್ ಏರಿ ಜಾಲಿ ರೈಡ್ ಹೋಗುತ್ತಾರೆ. 'ಐಪಿಎಸ್ ರಾಗಿಣಿ' ಚಿತ್ರದಲ್ಲಿ ರಾಗಿಣಿ ಕೂಡ ಸಾಕಷ್ಟು ದೃಶ್ಯಗಳಲ್ಲಿ ಬುಲೆಟ್ ಓಡಿಸಿದ್ದಾರೆ. ಹರ್ಷಿಕಾ ಪೂಣಚ್ಚ, ಪಾವನಾ, ನೇಹಾ ಪಾಟೀಲ್, ಚೈತ್ರಾ ಹೀಗೆ ಸಾಕಷ್ಟು ಕನ್ನಡ ನಟಿಯರು ಬೈಕ್ ಸವಾರಿ ಕಲಿತು, ಈಗ ಸ್ವಂತ ಸ್ಪೋರ್ಟ್ಸ್ ಬೈಕ್ ಖರೀದಿಸುವ ಉತ್ಸಾಹದಲ್ಲಿದ್ದಾರೆ.



ಆರ್ ಡಿ 350 ಗ್ರೂಪ್‌ನ ಸಂಘಟಕ ವಿಶಾಲ್ ಅಗರ್‌ವಾಲ್

## ಹೆಚ್ಚುತ್ತಿದೆ ಮಾರಾಟ

ಭಾರತದಲ್ಲಿ ಸದ್ಯ ಪ್ರತಿ ವರ್ಷ 2ರಿಂದ 3 ಸಾವಿರ ಸೂಪರ್ ಬೈಕ್‌ಗಳು ಮಾರಾಟವಾಗುತ್ತಿವೆ. ಇದರಲ್ಲಿ ರಾಯಲ್ ಎನ್‌ಫೀಲ್ಡ್ ಮತ್ತು ಹಾರ್ಲಿ ಡೆವಿಡ್‌ಸನ್ ಪಾಲೇ ಶೇಕಡಾ 60ರಷ್ಟಿದೆ. ಈ ಕಂಪೆನಿಗಳ ವಾರ್ಷಿಕ ಮಾರಾಟ ಪ್ರಗತಿ ಶೇಕಡಾ 40– 50ರಷ್ಟಿದೆ. ಸುಜುಕಿ ಮತ್ತು ಕೆಟಿಎಂ ಡ್ಯೂಕ್ ಕೂಡ ಇತ್ತೀಚೆಗೆ ನಿಧಾನವಾಗಿ ಮಾರುಕಟ್ಟೆ ಆಕ್ರಮಿಸಿಕೊಳ್ಳುತ್ತಿವೆ.

'2013–14ರಲ್ಲಿ 3,500 ಸೂಪರ್ ಬೈಕ್‌ಗಳು ಮಾರಾಟವಾಗಿವೆ. 2008–09ರಲ್ಲಿ ಈ ಸಂಖ್ಯೆ ಕೇವಲ 450 ಇತ್ತು. ಯಾವ ಮಾದರಿಯ ಕಾರುಗಳು ಬಂದರೂ, ವಿಲಾಸಿ ಬೈಕ್‌ಗಳಿಗೆ ಏರುತ್ತಿರುವ ಬೇಡಿಕೆಯನ್ನು ತಡೆಯಲಾಗದು' ಎನ್ನುತ್ತಾರೆ ಟ್ರಿಂಪ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ವಿಮಲ್ ಸುಂಬ್ಲಿ.

ಭಾರತದಲ್ಲಿ ಸೂಪರ್ ಬೈಕ್ ಅಥವಾ 500 ಸಿಸಿ ಮೇಲಿನ ಬೈಕ್‌ಗಳ ಮಾರುಕಟ್ಟೆ ಮುಂದಿನ 5 ವರ್ಷಗಳಲ್ಲಿ ದ್ವಿಗುಣಗೊಳ್ಳುವ ಸಾಧ್ಯತೆ ಇದೆ ಎನ್ನುತ್ತದೆ ಮಾರುಕಟ್ಟೆ ಅಧ್ಯಯನ. '2020ರ ವೇಳೆಗೆ ಭಾರತದಲ್ಲಿ ಪ್ರತಿ ವರ್ಷ ವಾರ್ಷಿಕ 20 ಸಾವಿರ ಸೂಪರ್ ಬೈಕ್‌ಗಳು ಮಾರಾಟವಾಗುವ ಸಾಧ್ಯತೆ ಇದೆ' ಎನ್ನುತ್ತಾರೆ ಯಮಹಾ ಮೋಟಾರ್‌ನ ಮಾರುಕಟ್ಟೆ ಉಪಾಧ್ಯಕ್ಷ ರಾಯ್ ಕುರಿಯನ್.

ಯುವಜನರು ಬದುಕನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಬೈಕ್ ಓಡಿಸುವಾಗಲೂ ಮೈ– ಕೈಗೆ ಹೆಚ್ಚು ಶ್ರಮ ಬೀಳಬಾರದು, ಆರಾಮವಾಗಿ ಓಡಿಸಬೇಕು ಎನ್ನುವುದು ಅವರ ವಾದ. ಜತೆಗೇ ಊರೂರು ಸುತ್ತುವ ಸುಖದ ಕಡೆಗೆ ಯುವಜನರ ಗಮನ ಹೆಚ್ಚಾಗಿದೆ. ವಿಲಾಸಿ ಬೈಕ್‌ಗಳ ಎದೆ ಢವಗುಟ್ಟಿಸುವ ಶಬ್ದದ ಜತೆಗೆ ರಸ್ತೆ ಮೇಲೆ ರಾಜ– ರಾಣಿಯರಂತೆ ಓಡಾಡುವ ಹೊಸ ಪೀಳಿಗೆ, ಈ ನಿಟ್ಟಿನಲ್ಲಿ ತಂತ್ರಜ್ಞಾನದ ಹೊಸ ಪ್ರಯೋಗಗಳನ್ನು ತೆರೆದ ಹಸ್ತದಿಂದ ಸ್ವಾಗತಿಸುತ್ತಿದೆ. ಅದಕ್ಕೆ ತಕ್ಕಂತೆ ಬೈಕ್ ಕಂಪೆನಿಗಳೂ ಹೊಸ ಹೊಸ ಮಾಡೆಲ್‌ಗಳನ್ನು ರಸ್ತೆಗಿಳಿಸುತ್ತಿವೆ. ವಿಲಾಸಿ ಬೈಕ್‌ಗಳ ವಿಹಾರ ಯೋಗ ಈಗ 'ವಿಲಾಸ' ಎನ್ನುವುದಕ್ಕಿಂತ 'ತೃಪ್ತಿಕರ ಬದುಕಿನ ಅಗತ್ಯಗಳಲ್ಲಿ ಒಂದು' ಎಂದಾಗಿದೆ.